ದಿನಾಂಕಃ 17.09.2022 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ಶ್ರೀ ಡಿ.ಎಸ್. ವಕೀಲರಿಂದ ಪಿರ್ಯಾದುದಾರರ ಪರವಾಗಿ**

1. ಮುಂದುವರೆದ ಮುಖ್ಯ ವಿಚಾರಣೆ ಇರುವುದಿಲ್ಲ.

**ಪಾಟೀ ಸವಾಲು ಶ್ರೀ ಡಿ.ಆರ್.ಸಿ. ವಕೀಲರಿಂದ – ಆರೋಪಿತನ ಪರವಾಗಿ**

2. ಪಾಟೀ ಸವಾಲು ಮಾಡಲು ಸಮಯಾವಕಾಶ ಕೇಳಿದ್ದು, ನೀಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ

ದಿನಾಂಕಃ 13.07.2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀ ಸವಾಲು ಶ್ರೀ ಹೆಚ್.ಆರ್.ಸಿ. ವಕೀಲರಿಂದ – ಆರೋಪಿತನ ಪರವಾಗಿ</u>**

3. ಆರೋಪಿಯ ಹೆಸರು ರವಿ ಆಗಿರುತ್ತದೆ. ಆರೋಪಿಯು ಬಣಕಲ್ ನಿವಾಸಿಯಾಗಿರುತ್ತಾರೆ. ಆರೋಪಿಯು ಹೆಗೂಡ್ಲು ಬಳಿ ವಾಸವಾಗಿರುತ್ತಾರೆ. ಆರೋಪಿಯು ತೋಟದ ಕೆಲಸಕ್ಕೆ ಕೂಲಿ ಆಳುಗಳನ್ನು ಸರಬರಾಜು ಮಾಡುತ್ತೇನೆ ಎಂದು ಹಣ ಪಡೆದುಕೊಂಡು ಹೋಗಿರುತ್ತಾರೆ. 2017 ರ ಜನವರಿ ತಿಂಗಳಿನಲ್ಲಿ ಆರೋಪಿಯು ಕೂಲಿ ಆಳುಗಳನ್ನು ಸರಬರಾಜು ಮಾಡುತ್ತೇನೆ ಎಂದು ತಿಳಿಸಿರುತ್ತಾರೆ. ಕೂಲಿ ಆಳುಗಳನ್ನು ತೋಟದ ಕೆಲಸಕ್ಕಾಗಿ ತರುವಂತೆ ನಾನು ಆರೋಪಿಗೆ ಹೇಳಿದ್ದೆನು. ಆರೋಪಿಯು 8 ಜನ ಆಳುಗಳನ್ನು ಕಳುಹಿಸುತ್ತೇನೆ ಎಂದು ಹೇಳಿರುತ್ತಾರೆ. ಸದರಿ ಕೂಲಿ ಆಳುಗಳನ್ನು ಸರಬರಾಜು ಮಾಡುವ ಸಲುವಾಗಿ ನನ್ನ ಮತ್ತು ಆರೋಪಿಯ ನಡುವೆ ಯಾವುದೇ ಕರಾರು ಪತ್ರ ಆಗಿರುವುದಿಲ್ಲ. ಆರೋಪಿಗೆ ಜನವರಿ 2017 ರ ತಿಂಗಳಿನಲ್ಲಿ ನಾನು ಹಣ ನೀಡಿರುತ್ತೇನೆ. ದಿನಾಂಕ ನನಗೆ ನೆನಪಿಲ್ಲ. ಆರೋಪಿಯು 4 ತಿಂಗಳಾದರು ತೋಟದ ಕೆಲಸಕ್ಕೆ ಜನ ಕಳಿಸಿರಲಿಲ್ಲ. ದಿಃ 17.07.2017 ರಂದು ಆರೋಪಿಯು ಚೆಕ್ಕನ್ನು ನೀಡಿರುತ್ತಾರೆ. ಯಾವ ದಿನಾಂಕದಂದು ಸದರಿ ಚೆಕ್ಕನ್ನು ನೀಡಿರುತ್ತಾರೆ ಎಂದು ನನಗೆ ನೆನಪಿಲ್ಲ. ದಿಃ 17.07.2017 ರಂದು ನಾನು ಎಸ್.ಬಿ.ಐ ಬ್ಯಾಂಕ್ ಕನ್ನಾಪುರ ಶಾಖೆಗೆ ನಗದೀಕರಣಕ್ಕಾಗಿ ಸಲ್ಲಿಸಿರುತ್ತೇನೆ. ಆರೋಪಿಗೆ ನಾನು ನಗದಾಗಿ ಹಣವನ್ನು ನೀಡಿರುತ್ತೇನೆ. ಆರೋಪಿಗೆ ಯಾವ ಮುಖ ಬೆಲೆಯ ನೋಟನ್ನು ನೀಡಿರುತ್ತೇನೆ ಎಂದು ನನಗೆ ಈಗ ನೆನಪಿಲ್ಲ. ಆರೋಪಿ ನೀಡಿರುವ ಚೆಕ್ಕಿನ ಸಂಖ್ಯೆ ನನಗೆ ನೆನಪಿಲ್ಲ. ಆರೋಪಿ ನೀಡಿರುವ ಚೆಕ್ಕಿನ ಸಂಖ್ಯೆಯ ವಿರುದ್ದವೇ ಈ ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿ. ಚೆಕ್ಕು ಅಮಾನ್ಯಗೊಂಡ ನಂತರ ನಾನು ನನ್ನ ವಕೀಲರ ಮೂಲಕ ಆರೋಪಿಗೆ

ನೋಟೀಸು ನೀಡಿರುತ್ತೇನೆ. ಸದರಿ ನೋಟೀಸನ್ನು ನೀಡುವ ಸಮಯದಲ್ಲಿ ನಾನು ಚೆಕ್ಕನ್ನು ನನ್ನ ವಕೀಲರಿಗೆ ನೀಡಿರುತ್ತೇನೆ. ಆರೋಪಿ ನನಗೆ ನೀಡಿರುವ ಚೆಕ್ಕಿನ ಸಂಖ್ಯೆ 910192 ಆಗಿರುತ್ತದೆ. ಸದರಿ ಚೆಕ್ಕಿನ ಆಧಾರದ ಮೇಲೆಯೇ ನಾನು ನೋಟೀಸು ನೀಡುವಂತೆ ವಕೀಲರಿಗೆ ತಿಳಿಸಿರುತ್ತೇನೆ. ನಿ.ಪಿ.3 ದಾಖಲೆಯು ನನ್ನ ವಕೀಲರ ಮೂಲಕ ಆರೋಪಿಗೆ ನೀಡಿರುವ ನೋಟೀಸು ಆಗಿರುತ್ತದೆ. ಸದರಿ ನೋಟೀಸಿನಲ್ಲಿ ಚೆಕ್ಕಿನ ಸಂಖ್ಯೆಯನ್ನು 900192 ಎಂದು ನಮೂದು ಇರುತ್ತದೆ ಎಂದರೆ ಸರಿ. ನಾನು ದಾಖಲು ಮಾಡಿರುವ ದೂರಿನಲ್ಲಿ ಚೆಕ್ಕಿನ ಸಂಖ್ಯೆ 900192 ಆಗಿರುತ್ತದೆ ಎಂದರೆ ಸರಿ. ಈ ದೂರಿನಲ್ಲಿ ನಮೂದು ಮಾಡಿರುವ ಚೆಕ್ಕಿಗೂ ಆರೋಪಿ ನೀಡಿರುವ ಚೆಕ್ಕಿನ ಸಂಖ್ಯೆಗೂ ಒಂದಕ್ಕೊಂದು ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಚೆಕ್ಕಿನ ಸಂಖ್ಯೆಯು 900192 ಎಂದು ನಮೂದು ಇರುತ್ತದೆ ಎಂದರೆ ಸರಿ. ಆರೋಪಿಗೂ ಮತ್ತು ನನಗೂ ಯಾವುದೇ ವ್ಯವಹಾರ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ನಾನು ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ಹಾಜರು ಮಾಡಿರುವ ಚೆಕ್ಕನ್ನು ಆರೋಪಿಯು ನನಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

4. ನಿ.ಪಿ.1 ಚೆಕ್ಕಿನಲ್ಲಿ ಇರುವ ಸಹಿಯು ಆರೋಪಿಯ ಸಹಿ ಅಲ್ಲ ಎಂದರೆ ಸರಿಯಲ್ಲ. ಚೆಕ್ಕಿನಲ್ಲಿ ಇರುವ ಬರವಣಿಗೆಯನ್ನು ಆರೋಪಿಯೇ ಬರೆದುಕೊಟ್ಟಿರುತ್ತಾರೆ. ಆರೋಪಿಗೆ ಇಂಗ್ಲೀಷ್ ಓದಲು ಬರೆಯಲು ಬರುತ್ತದೋ ಇಲ್ಲವೋ ನನಗೆ ಗೊತ್ತಿಲ್ಲ. ನಿ.ಪಿ.1 ಚೆಕ್ಕಿನಲ್ಲಿ ನಮೂದು ಮಾಡಿರುವ ದಿನಾಂಕದ ಕೈ ಬರಹಕ್ಕೂ ಹಣವನ್ನು ನಮೂದು ಮಾಡಿರುವ ಕೈ ಬರಹಕ್ಕೂ ವ್ಯತ್ಯಾಸ ಇರುತ್ತದೆ ಎಂದರೆ ಸಾಕ್ಷಿಯು ಆರೋಪಿಯೇ ಸದರಿ

ಬರವಣಿಗೆಯನ್ನು ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿಯು ನನ್ನ ಬಳಿ ಬರುವಾಗ ಚೆಕ್ಕನ್ನು ಬರೆದುಕೊಂಡೇ ಬಂದಿರುತ್ತಾರೆ. ದಿಃ 04.10.2017 ರಂದು ಬ್ಯಾಂಕಿನಿಂದ ಚೆಕ್ಕು ಅಮಾನ್ಯವಾದ ಬಗ್ಗೆ ಹಿಂಬರಹವನ್ನು ನೀಡಿರುತ್ತಾರೆ. ದಿಃ 16.10.2017 ರಂದು ನಾನು ಆರೋಪಿಗೆ ನೋಟೀಸನ್ನು ನೀಡಿರುತ್ತೇನೆ. ಸದರಿ ನೋಟೀಸು ಯಾವ ದಿನಾಂಕದಂದು ಆರೋಪಿಗೆ ತಲುಪಿರುತ್ತದೆ ಎಂದು ನನಗೆ ಗೊತ್ತಿಲ್ಲ. ಯಾವ ದಿನಾಂಕದಂದು ದೂರನ್ನು ದಾಖಲು ಮಾಡಿರುತ್ತೇನೆ ಎಂದು ನನಗೆ ಈಗ ನೆನಪಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ